<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ</u>

<u>ಸಿ.ಸಿ. ಸಂಖ್ಯೆಃ **1123/2024**</u>

<u>ಪಿರ್ಯಾದಿ</u> : ರಾಜ್ಯ, ಪರವಾಗಿ ಬಣಕಲ್ ಪೊಲೀಸ್ ಠಾಣೆ,

ವಿರುದ್ಧ

<u>ಆರೋಪಿ</u> : ಅರುಣ್ ಕುಮಾರ್ ಬಿ.ವಿ. ಯಾನೆ ಅರುಣ,
ವಯಸ್ಸು ಸುಮಾರು 32 ವರ್ಷ,
ಬಿನ್ ವಸಂತ್ ಕುಮಾರ್,
ವಾಸಃ ಫಲ್ಗುಣಿ ಗ್ರಾಮ, ಬಣಕಲ್ ಹೋಬಳಿ,
ಮೂಡಿಗೆರೆ ತಾಲ್ಲೂಕು.

<u>ದೋಷಾರೋಪಣೆ</u>

ಶ್ರೀ. ವಿಶ್ವನಾಥ್ ಎ., C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆಗಳು ಏನೆಂದರೆಃ-

ದಿನಾಂಕಃ 28.11.2023 ರಂದು ಮದ್ಯಾಹ್ನ 03.30 ರ ಸಮಯದಲ್ಲಿ ಬಣಕಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಚಾಸಾ-1 ಬಿ.ವಿ. ಸುಕನ್ಯ ರವರು ಬಜಾಜ್ ಫೈನಾನ್ಸ್ ಕಂಪನಿಯಲ್ಲಿ ಪರ್ಸನಲ್ ಲೋನ್ ಪಡೆಯಲು ಅರ್ಜಿ ಸಲ್ಲಿಸಿದ್ದು ಕಂಪನಿಯಿಂದ ಚಾಸಾ-1 ರವರ ಆಧಾರ್ ಕಾರ್ಡ್ ವಿಳಾಸದ ಪರಿಶೀಲನೆಗಾಗಿ ಮನೆ ಮುಂದೆ ಫೋಟೋ ಬೇಕಾದ ಕಾರಣ ಚಾಸಾ-4 ರವರು ಚೈತನ್ಯ ಎ. ಚಾಸಾ-1 ಸಕನ್ಯ ಬಿ.ವಿ., ಚಾಸಾ-2 ವಸಂತ ಕುಮಾರ್ ಯಾನೆ ಅಪ್ಪಣಚಾರಿ ಹಾಗೂ ಚಾಸಾ-3 ಕಿರಣ್ ರೈ ರವರೊಂದಿಗೆ ಚಾಸಾ-2 ರವರ ಮನೆಗೆ ಹೋಗಿದ್ದು, ಮೂಡಿಗೆರೆ ತಾಲ್ಲೂಕು ಬಣಕಲ್ ಹೋಬಳಿ ಪಲ್ಗುಣಿ ಗ್ರಾಮದ ಚಾಸಾ-2 ರವರ ಮನೆಯ ಮುಂದಿನ ಸಾರ್ವಜನಿಕ ರಸ್ತೆಯಲ್ಲಿ ಚಾಸಾ-1 ರವರ ಫೋಟೋವನ್ನು ಬಜಾಜ್ ಕಂಪನಿಯ ಚಾಸಾ-4 ರವರು ತೆಗೆಯಲು ಹೋದಾಗ ಮನೆಯ ಒಳಗಿದ್ದ ಆರೋಪಿಯಾದ ನೀವು ಚಾಸಾ-1 ರವರನ್ನು ಉದ್ದೇಶಿಸಿ ಹಲ್ಕ ಲೌಡಿ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ **504** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**2**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಮುಂದುವರೆದು, ಚಾಸಾ-2 ರವರಿಗೆ ಕತ್ತಿ ತೋರಿಸಿ ಹೊಡೆಯಲು ಪ್ರಯತ್ನಿಸಿ ಓಡಾಡಿಸಿಕೊಂಡು ಬಂದು ಚಾಸಾ-1 ರವರನ್ನು ಕೆಳಗೆ ಬಿಳಿಸಿ, ಕೈಯಿಂದ ಚಾಸಾ-1 ರವರ ತಲೆಗೆ ಹೋಡೆದು, ಕಾಲಿನಿಂದ ಒದ್ದು, ಚಾಸಾ-1 ರವರನ್ನು ಹೊಡೆಯುವುದನ್ನು ತಪ್ಪಿಸಲು ಬಂದ ಚಾಸಾ-2 ರವರನ್ನು ಸಹ ರಸ್ತೆಯಲ್ಲಿ ಕೆಳಕ್ಕೆ ಬಿಳಿಸಿ ಕಾಲಿನಿಂದ ಒದ್ದಿದ್ದು, ಸಾಧಾರಣ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ **324** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**3**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಮುಂದುವರೆದು, ಮನೆಯಿಂದ ಕತ್ತಿಯನ್ನು ತಂದಿದ್ದು ಚಾಸಾ-1 ರವರಿಗೆ ಕತ್ತಿಯ ತುದಿ ತಾಗಿ ಪೆಟ್ಟಾಗಿದ್ದು, ಭುಜದ ಎಡಭಾಗ, ಎದೆ ಮಧ್ಯಭಾಗ ಪೆಟ್ಟಾಗಿ ಸಾಮಾನ್ಯ ಸ್ವರೂಪದ ನೊಂವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ **323** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**4.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಮುಂದುವರೆದು, ಕತ್ತಿಯನ್ನು ತೋರಿಸಿ ಕೊಲೆಬೆದರಿಕೆ ಹಾಕಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ **506** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**5.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಮುಂದುವರೆದು, ಚಾಸಾ-4 ರವರು ಚಾಸಾ-1 ರವರ ಫೋಟೋ ತೆಗೆಯಲು ಹೋದಾಗ, ಫೋಟೋ ತೆಗೆಯದಂತೆ ಚಾಸಾ-1 ರವರಿಗೆ ಅಡ್ಡಿ ಪಡಿಸಿ, ಗೇಟಿನ ಒಳಗೆ ಬಾರದಂತೆ ಹೇಳಿ ತಾನು ಕೋರ್ಟಿನಿಂದ ಮನೆಗೆ ಇಂಜೆಕ್ಷನ್ ತಂದಿರುತ್ತೇನೆ ನೀವ್ಯಾರು ಮನೆಯ ಒಳಗಡೆ ಬರುವಂತಿಲ್ಲ ಎಂದು ತಡೆದಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ **341** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ.

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ? ಅವುಗಳು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರಃ

(ಆರೋಪಿಗೆ ದಿನಾಂಕ 05.11.2024 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

**sd/-**

ಮೂಡಿಗೆರೆ
ದಿನಾಂಕಃ 05.11.2024

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.